# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

## ರಾಜ್ಯ ಸಮಿತಿ, ಕರ್ನಾಟಕ

**ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ,**

ಹೋರಾಟದ ಶುಭಾಶಯಗಳು.

ಮಾರ್ಚ್ 17ರಂದು ನಮ್ಮ ಪಕ್ಷದ ಪ್ರಜಾ ವಿಮೋಚನಾ ಗೆರಿಲ್ಲಾ ಸೇನೆ ನಡೆಸಿದ ಪೊಲೀಸರ ಮೇಲಿನ ದಾಳಿಯ ಕುರಿತಾದ ನಮ್ಮ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ತಾವುಗಳು ಪ್ರಕಟಿಸಬೇಕೆಂದು ಕೋರುತ್ತಿದ್ದೇವೆ.

**ಕ್ರಾಂತಿಕಾರಿ ವಂದನೆಗಳು.**

ಹೋರಾಟದಲ್ಲಿ ತಮ್ಮೊಂದಿಗೆ,
ಗಂಗಾಧರ್, ರಾಜ್ಯ ಸಮಿತಿ ಪರವಾಗಿ
ಸಿಪಿಐ (ಮಾವೋವಾದಿ)
ಕರ್ನಾಟಕ

20/03/2009

---

ಕಳೆದ **17**ರಂದು ನಮ್ಮ ಪ್ರಜಾ ವಿಮೋಚನಾ ಗೆರಿಲ್ಲಾ ಸೇನೆ **(PLGA)** ಶೃಂಗೇರಿ ಬಳಿಯ ಮಾತೊಳ್ಳಿ ಬಳಿ ಜನಕಂಟಕ ಪಡೆಯಾದ ನಕ್ಸಲ್ ನಿಗ್ರಹ ದಳದ ಮೇಲೆ ಬಾಂಬ್ ದಾಳಿ ನಡೆಸಿದೆ. ಪಾದಚಾರಿಗಳಾಗಿ ನಮ್ಮ ಪಿಎಲ್‌ಜಿಎ ದಳಗಳ ನಿರ್ಮೂಲನೆಗಾಗಿ ಹುಡುಕಾಡುತ್ತಿದ್ದ ಕ್ರೂರ ನಕ್ಸಲ್ ನಿಗ್ರಹ ಪಡೆ, ನಾವು ನಡೆಸಿದ ದಾಳಿಯಲ್ಲಿ ಗಾಯಗೊಂಡಿತು ಚೆಲ್ಲಾಪಿಲ್ಲಿಯಾಗಿ ಓಡಿಹೋಯಿತು. ನಮ್ಮ ಪಿಎಲ್‌ಜಿಎ ವೀರೋಚಿತವಾಗಿ ದಾಳಿ ನಡೆಸಿ ಯಶಸ್ವಿಯಾಗಿ ಹಿಂದ್ಸರಿಯಿತು. ಈ ಪ್ರಕ್ರಿಯೆಯಲ್ಲಿ ಕಣ್ತಪ್ಪಿನಿಂದಾಗಿ ರಿಪೇರಿಗಾಗಿ ಇದ್ದ ಒಂದು ಎಸ್‌ಬಿಬಿಎಲ್ ಬಂದೂಕು ನಂತರ ಬಂದ ಪೊಲೀಸರ ಕೈಗೆ ಸೇರಿತು.

ಜನಕಂಟಕ ಪೊಲೀಸ್ ಪಡೆಯ ಮೇಲೆ ನಾವು ನಡೆಸಿದ ಈ ದಾಳಿ ಜನರಲ್ಲಿ ಮತ್ತಷ್ಟು ಧೈರ್ಯವನ್ನು ಮೂಡಿಸಿದೆ. ದೃಕ್ಪಥ ಪ್ರದೇಶದ ಶೋಷಿತ ಜನರು ನಮ್ಮ ಈ ದಾಳಿಯನ್ನು ಎತ್ತಿಹಿಡಿದಿದ್ದಾರೆ. ನಾಡಿನ ಜನಪರ ವ್ಯಕ್ತಿ, ಸಂಘಟನೆಗಳು ಈ ದಾಳಿಯನ್ನು ಎತ್ತಿಹಿಡಿಯಬೇಕೆಂದು ಮನವಿ ಮಾಡುತ್ತಿದ್ದೇವೆ. ಜನರ ಹೋರಾಟಗಳನ್ನು ದಮನಿಸಿ ಜನರ ಬದುಕನ್ನು ನಾಶ ಮಾಡಿ ಆಳುವ ವರ್ಗಗಳ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿರುವ ಪೊಲೀಸ್ ಪಡೆ ತನ್ನ ಜನವಿರೋಧಿತನಗಳನ್ನು ಕೈಬಿಡದಿದ್ದಲ್ಲಿ ನಾವು ಹೆಚ್ಚುಹೆಚ್ಚು ಪ್ರತಿದಾಳಿಗಳನ್ನು ನಡೆಸಬೇಕಾದ ಅನಿವಾರ್ಯತೆ ಬರುತ್ತದೆ. ನಮ್ಮ ಪಿಎಲ್‌ಜಿಎ ಪಡೆ ಅದಕ್ಕೆ ಸಿದ್ಧವಾಗಿದೆ. ಸಾಮಾನ್ಯ ಪೊಲೀಸ್ ಪೇದೆಗಳು ಇಂತಹ ಜನವಿರೋಧಿ ಕೆಲಸಗಳಿಂದ ಹಿಂದ್ಸರಿಯಬೇಕೆಂದು ಕೋರುತ್ತಿದ್ದೇವೆ.

ಸರ್ಕಾರ ಕೂಡಲೇ ಜನವಿರೋಧಿ ನಕ್ಸಲ್ ನಿಗ್ರಹ ಪಡೆಯನ್ನು ರದ್ದುಗೊಳಿಸಿ ಜನರ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಈ ಮೂಲಕ ಆಗ್ರಹಿಸುತ್ತಿದ್ದೇವೆ.

* ಮಲೆನಾಡು ಕರಾವಳಿಗಳಲ್ಲಿ ಜಾರಿಗೊಳಿಸಲು ಉದ್ದೇಶಿಸಿರುವ ಎಲ್ಲಾ ಜನವಿರೋಧಿ ಯೋಜನೆಗಳನ್ನು ಕೂಡಲೇ ರದ್ದುಗೊಳಿಸಬೇಕು.
* ಜನರಿಗೆ ಭೂಮಿ ಹಾಗೂ ಭೂದಾಖಲೆಗಳನ್ನು ಒದಗಿಸಬೇಕು. ಭೂಮಾಲೀಕರ ಹೆಚ್ಚುವರಿ ಭೂಮಿಗಳನ್ನು ಭೂಹೀನರಿಗೆ ಹಂಚಬೇಕು. ಸಣ್ಣ, ಮಧ್ಯಮ ಹಾಗೂ ಮೇಲ್ಮಧ್ಯಮ ಅಡಿಕೆ ಬೆಳೆಗಾರರು ಹಾಗೂ ಕಾಫಿ ಬೆಳೆಗಾರರನ್ನು ರಕ್ಷಿಸಲು ಅವರಿಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿ ಮಾಡಿ ಖಾತ್ರಿಗೊಳಿಸಬೇಕು.
* ಎನ್‌ಕೌಂಟರ್ ಹೆಸರಿನಲ್ಲಿ ಮಾಡುತ್ತಿರುವ ಕಗ್ಗೊಲೆಗಳನ್ನು ಕೂಡಲೇ ನಿಲ್ಲಿಸಬೇಕು.
* ಜನರ ಮೇಲೆ ಹಾಕಿರುವ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು.
* ಎಲ್ಲಾ ಎನ್‌ಕೌಂಟರ್ ಕೊಲೆಗಳಿಗೆ ಕಾರಣರಾದ ಪೊಲೀಸ್ ಅಧಿಕಾರಿಗಳ ಮೇಲೆ ಕೊಲೆ ಮೊಕದ್ದಮೆ ಹೂಡಿ ಬಂಧಿಸಿ ಕ್ರಮ ತೆಗೆದುಕೊಳ್ಳಬೇಕು.
* ಜನಸಾಮಾನ್ಯರಿಗೆ ಪ್ರಜಾತಾಂತ್ರಿಕ ಹಕ್ಕುಗಳ ಚಲಾವಣೆಗೆ ಮುಕ್ತ ಅವಕಾಶ ಮಾಡಬೇಕು.

**ಕೆಂಪು ವಂದನೆಗಳು.**

**ಗಂಗಾಧರ್, ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**20/03/2009**